ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ ಕೃಷ್ಣರಾಜಪೇಟೆ ತಾ; ಮಂಡ್ಯ ಜಿಲ್ಲೆ

ಸಂಖ್ಯೆ: ಎ2/ಮಾ. ನವೀ/96/2020-21 ದಿನಾಂಕ: 23/03/2021

## ಜ್ಞಾಪನ

ವಿಷಯ:- ಗ್ರಾಮಭಾರತಿ ಹಿರಿಯ ಪ್ರಾಥಮಿಕ ಶಾಲೆ,ಕೆ ಆರ್ ಪೇಟೆ ಟೌನ್,ಕೆ ಆರ್ ಪೇಟೆ ತಾಲ್ಲೂಕು ಈ ಶಾಲೆಯ ಮಾನ್ಯತೆ ನವೀಕರಣ ಮಾಡುವ ಬಗ್ಗೆ.

ಉಲ್ಲೇಖ: 1.ಕಾರ್ಯದರ್ಶಿ, ಗ್ರಾಮಭಾರತಿ ಹಿರಿಯ ಪ್ರಾಥಮಿಕ ಶಾಲೆ,ಕೆ ಆರ್ ಪೇಟೆ ಟೌನ್ ಕೆ.ಆರ್.ಪೇಟೆ ತಾಲ್ಲೂಕು,ಇವರ ಮಾನ್ಯತೆ ನವೀಕರಣ ಪ್ರಸ್ತಾವನೆ ದಿನಾಂಕ12/01/2021

2. ಕ್ಷೇತ್ರಶಿಕ್ಷಣಾಧಿಕಾರಿಗಳು ಕೃಷ್ಣರಾಜಪೇಟೆ ಇವರ ಸ್ಥಳ ಪರಿಶೀಲನಾ ವರದಿ ದಿನಾಂಕ 16/03/2021

***************

ಪ್ರಸ್ತಾವನೆ:- ಕಾರ್ಯದರ್ಶಿ, ಗ್ರಾಮಭಾರತಿ ಹಿರಿಯ ಪ್ರಾಥಮಿಕ ಶಾಲೆ,ಕೆ ಆರ್ ಪೇಟೆ ಟೌನ್,ಕೆ ಆರ್ ಪೇಟೆ ತಾಲ್ಲೂಕು,ಮಂಡ್ಯ ಜಿಲ್ಲೆ ಇವರ ವತಿಯಿಂದ ನಡೆಯುತ್ತಿರುವ ಗ್ರಾಮಭಾರತಿ ಹಿರಿಯ ಪ್ರಾಥಮಿಕ ಶಾಲೆ,ಕೆ ಆರ್ ಪೇಟೆ ಟೌನ್, ಕೆ.ಆರ್.ಪೇಟೆ ತಾಲ್ಲೂಕು, ಈ ಶಾಲೆಗೆ 06 ರಿಂದ 08 ನೇ ತರಗತಿ ಆಂಗ್ಲ ಮಾಧ್ಯಮದಲ್ಲಿ ಅನುದಾನ ರಹಿತವಾಗಿ ಮಾನ್ಯತೆ ನವೀಕರಣ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ

ಆದೇಶ:- ಗ್ರಾಮಭಾರತಿ ಹಿರಿಯ ಪ್ರಾಥಮಿಕ ಶಾಲೆ,ಕೆ ಆರ್ ಪೇಟೆ ಟೌನ್,ಕೆ ಆರ್ ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ ಈ ಶಾಲೆಯ ಪ್ರಸ್ತಾವನೆಯನ್ನು ಪರಿಶೀಲಿಸಿದ್ದು ಉಲ್ಲೇಖ-2 ರನ್ವಯ ಷರತ್ತುಗೊಳಪಡಿಸಿ ಮಾನ್ಯತೆ ನವೀಕರಿಸಿದೆ.

ವಿಧಿಸಿರುವ ಷರತ್ತುಗಲನ್ನಾಗಲೀ ಅನುಧಾನ ಸಂಹಿತೆ /ಶಿಕ್ಷಣ ಕಾಯ್ದೆ/ ಆರ್ ಟಿ ಇ ನಿಯಮಗಳನ್ನಾಗಲೀ ಗಡುವಿನೊಳಗೆ ಪೂರೈಸದಿದ್ದಲ್ಲಿ,ನಿಯಮ ಮತ್ತು ಆದೇಶ ಉಲ್ಲಂಘಿಸಿದಲ್ಲಿ ಮಾನ್ಯತೆ ರದ್ದುಡಿಸುವ /ಹಿಂತೆಗೆದುಕೊಳ್ಳುವ ಹಕ್ಕು ಇಲಾಖೆಗೆ /ಜಿಲ್ಲಾ ಪಂಚಾಯತ್‌ಗೆ ಇರುತ್ತದೆ

| ಕ್ರ ಸಂ | ಶಾಲೆಯ ಹೆಸರು | ತರಗತಿ ಮತ್ತು ಮಾಧ್ಯಮ | ಮಾನ್ಯತೆ ಅವಧಿ |
|---|---|---|---|
| 1 | ಗ್ರಾಮಭಾರತಿ ಹಿರಿಯ ಪ್ರಾಥಮಿಕ ಶಾಲೆ,ಕೆ ಆರ್ ಪೇಟೆ ಟೌನ್ ಕೆ ಆರ್ ಪೇಟೆ ತಾಲ್ಲೂಕು | 06-08 ನೇ ತರಗತಿ ಆಂಗ್ಲ ಮಾಧ್ಯಮ | 2020-21 ರಿಂದ 2022-23 ರವರೆಗೆ ರವರೆಗೆ ಶ್ವಾಶ್ವತ ಅನುದಾನ ರಹಿತವಾಗಿ ತಲಾ ಒಂದು ವಿಭಾಗಕ್ಕೆ ಮಾನ್ಯತೆ ನವೀಕರಿಸಿದೆ |

ಷರತ್ತುಗಳು:-

01. ಪ್ರತಿಯೊಂದು ತರಗತಿಯಲ್ಲಿ ವಿದ್ಯಾರ್ಥಿಗಳ ದಾಖಲಾತಿ/ಹಾಜರಾತಿ ಕನಿಷ್ಠ 50:40:1 (ವಿದ್ಯಾರ್ಥಿಗಳ ದಾಖಲಾತಿ/ ಹಾಜರಾತಿ/ಶಿಕ್ಷಕರ ಅನುಪಾತ)ರಂತೆ ಕಡ್ಡಾಯವಾಗಿ ಇರತಕ್ಕದ್ದು.
02. ಇಲಾಖೆಯಲ್ಲಿ ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿರುವ ತರಬೇತಿ ಹೊಂದಿದ ಶಿಕ್ಷಕರನ್ನೇ ನಿಯಮಗಳನ್ವಯ ನೇಮಕ ಮಾಡಿಕೊಂಡು ಬೋಧನೆ ಮಾಡಬೇಕು.
03. ಶಾಲೆಯು ಸ್ವಂತ ಕಟ್ಟಡ ಮತ್ತು ಆಟದ ಮೈದಾನ ಹೊಂದಿರಬೇಕು.ಬಾಡಿಗೆ ಕಟ್ಟಡ ಹೊಂದಿದ್ದರೆ ಉಪನೊಂದಣಿ ಕಛೇರಿಯಲ್ಲಿ 30 ವರ್ಷಗಳ ಶೈಕ್ಷಣಿಕ ಉದ್ದೇಶಕ್ಕೆ ನೊಂದಣಿಯಾಗಿರಬೇಕು
04. ಶಾಲೆಗೆ ಅನುದಾನ ಸಂಹಿತೆಯ ರಿತ್ಯಾ ಪಾಠೋಪಕರಣ ಮತ್ತು ಪೀಠೋಪಕರಣಗಳನ್ನು ಒದಗಿಸತಕ್ಕದ್ದು.
05. ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಮತ್ತು ಸಿಬ್ಬಂದಿಗೆ ಶುದ್ಧ ಕುಡಿಯುವ ನೀರು ಒದಗಿಸತಕ್ಕದ್ದು.
06. ಶಾಲೆಯಲ್ಲಿ ಹೆಣ್ಣು ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕ ಶೌಚಾಲಯ ಒದಗಿಸತಕ್ಕದ್ದು.
07. ಇಲಾಖೆಯು ನಿಗದಿಪಡಿಸಿರುವ ಪಠ್ಯ ಪುಸ್ತಕ ಹಾಗೂ ಬೋಧನಾ ಕ್ರಮವನ್ನು ಕಡ್ಡಾಯವಾಗಿ ಅನುಸರಿಸಬೇಕು.
08. ಇಲಾಖೆಯು ನಿಗದಿಪಡಿಸುವ ಶಾಲಾ ವೇಳೆ ಮತ್ತು ವೇಳಾಪಟ್ಟಿಯನ್ನು ಅನುಸರಿಸಬೇಕು.
09. ಸ್ಥಿರನಿಧಿ ಠೇವಣಿಯನ್ನು ಕಡ್ಡಾಯವಾಗಿ ರಾಷ್ಟ್ರೀಕೃತ ಬ್ಯಾಂಕುಗಳಲ್ಲೇ ಜಂಟಿಖಾತೆಯಲ್ಲಿ ತೊಡಗಿಸಿ ಅವಧಿ ಮುಗಿದ ತಕ್ಷಣ ಆಗಿಂದಾಗ್ಗೆ ನವೀಕರಿಕೊಳ್ಳಬೇಕು

10. ಶಾಲೆಗೆ ವಿಜ್ಞಾನ ಮತ್ತು ಬೋಧನಾ ಉಪಕರಣಗಳನ್ನು ಒದಗಿಸತಕ್ಕದ್ದು.
11. ಇಲಾಖೆಯ ಪೂರ್ವಾನುಮತಿ ಪಡೆಯದೇ ಯಾವುದೇ ಕಾರಣಕ್ಕೂ ಹೆಚ್ಚಿನ ವಿಭಾಗಗಳನ್ನು ತೆರೆಯಕೂಡದು.
12. ಮುಂದಿನ ಸಾಲಿನ ಪ್ರಸ್ತಾವನೆಯನ್ನು ಅನುದಾನ ಸಂಹಿತೆಯ 19(1)ರ ರಿತ್ಯಾ ನಿಗದಿತ ವೇಳೆಗೆ ಸಲ್ಲಿಸಬೇಕು.
13. ಸರ್ಕಾರ ಮತ್ತು ಇಲಾಖೆಯು ಹೊರಡಿಸುವ ಆದೇಶಗಳನ್ನು ತಪ್ಪದೇ ಪಾಲಿಸಬೇಕು.
14. ಮಕ್ಕಳ ಸುರಕ್ಷತಾ ಕ್ರಮಗಳನ್ನು ಕಡ್ಡಾಯವಾಗಿ ಪಾಲಿಸುವುದು.
15. ಸಿ.ಸಿ.ಟಿ.ವಿ ಕಡ್ಡಾಯವಾಗಿ ಅಳವಡಿಸತಕ್ಕದ್ದು.
16. ಶಾಲೆಯು ಇಲಾಖೆಯ ನಿಯಮಗಳನ್ನು ಪಾಲಿಸದಿರುವ ಬಗ್ಗೆ ಮತ್ತು ಸಾರ್ವಜನಿಕರಿಂದ ಕರ್ತವ್ಯ ಲೋಪದ ಬಗ್ಗೆ ದೂರು ಬಂದಲ್ಲಿ ಈ ಬಗ್ಗೆ ಪರಿಶೀಲಿಸಿ ಮಾನ್ಯತೆ ವಾಪಸ್ಸು ಪಡೆಯುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

17. ಶಾಲೆಯು ಇಲಾಖೆಯ ನಿಯಮಗಳನ್ನು ಪಾಲಿಸದಿರುವ ಬಗ್ಗೆ ಮತ್ತು ಸಾರ್ವಜನಿಕರಿಂದ ಕರ್ತವ್ಯ ಲೋಪದ ಬಗ್ಗೆ ದೂರು ಬಂದಲ್ಲಿ ಈ ಬಗ್ಗೆ ಪರಿಶೀಲಿಸಿ ಮಾನ್ಯತೆ ವಾಪಸ್ಸು ಪಡೆಯುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು

ಕ್ಷೇತ್ರಶಿಕ್ಷಣಾಧಿಕಾರಿಗಳು
ಕೃಷ್ಣರಾಜಪೇಟೆ

<u>ಪ್ರತಿಗಳನ್ನು,</u>

01 ಕಾರ್ಯದರ್ಶಿ, ಗ್ರಾಮಭಾರತಿ ಹಿರಿಯ ಪ್ರಾಥಮಿಕ ಶಾಲೆ,ಕೆ ಆರ್ ಪೇಟೆ ಟೌನ್,ಕೆ.ಆರ್.ಪೇಟೆ ತಾಲ್ಲೂಕು,ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ
2.ಕಛೇರಿ ಪ್ರತಿ